**ಕರ್ನಾಟಕ ಸರ್ಕಾರ**

**ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ**

ಸಂಖ್ಯೆ: ಸಚುಆ/17/ನೀತಿಸಂಹಿತೆ/2013-14

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ (ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು-560004 ದಿನಾಂಕ:21.09.2013

**ವಿಷಯ:-** ಸಹಕಾರ ಸಂಸ್ಥೆಗಳ /ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಚುನಾವಣೆ ಸಂಬಂಧ ಮಾದರಿ ನೀತಿ ಸಂಹಿತೆ ಜಾರಿಗೊಳಿಸುವ ಕುರಿತು.

**ಉಲ್ಲೇಖ:-** ಆಯೋಗದ ಸಮಸಂಖ್ಯೆ ಪತ್ರ ದಿನಾಂಕ:03.08.2013 ಮಾದರಿ ನೀತಿ ಸಂಹಿತೆ ಪ್ರಕಟಣೆ.

***

ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಳಿ ಚುನಾವಣೆಗಳ ಸಂಬಂಧ ರಾಜ್ಯ ಸಹಕಾರ ಚುನಾವಣಾ ಆಯೋಗವು ಈಗಾಗಲೇ ಉಲ್ಲೇಖಿತ ಪತ್ರದಂತೆ ನೀತಿ ಸಂಹಿತೆಯನ್ನು ಪ್ರಕಟಿಸಿದ್ದು, ಇದು ಸಹಕಾರ ಸಂಘಗಳ ಚುನಾವಣೆ ಸಂಬಂಧ ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ ದಿನಾಂಕದಿಂದ ಚುನಾವಣಾ ನಡವಳಿ ಅಂತ್ಯಗೊಳ್ಳುವವರೆಗೆ ಜಾರಿಯಲ್ಲಿರುವುದಾಗಿ ನಿರ್ದೇಶಿಸಲಾಗಿದೆ.

ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟಗಳ ಆಡಳಿತ ಮಂಡಳಿ ಚುನಾವಣೆಗೆ ಸಂಬಂಧಿಸಿದಂತೆ ಉಲ್ಲೇಖದಲ್ಲಿ ನೀಡಿರುವ ನೀತಿ ಸಂಹಿತೆ ಜತೆಗೆ ಈ ಕೆಳಕಂಡಂತೆ ಹೆಚ್ಚುವರಿ ವಿಷಯಗಳನ್ನು ಸೇರ್ಪಡೆ ಮಾಡಿದ್ದು, ಈ ಅಂಶಗಳು ಚುನಾವಣೆ ವೇಳಾಪಟ್ಟಿ ಪ್ರಕಟಿಸಿದ ದಿನಾಂಕದಿಂದ ಚುನಾವಣೆ ನಡವಳಿ ಅಂತ್ಯಗೊಳ್ಳುವವರೆಗೆ ಜಾರಿಯಲ್ಲಿರುತ್ತದೆ.

1. ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟಗಳ ಚುನಾವಣಾ ವೇಳಾಪಟ್ಟಿ ಪ್ರಕಟಗೊಂಡು ಚುನಾವಣೆ ಪೂರ್ಣಗೊಳ್ಳುವವರೆಗೆ ಅಧ್ಯಕ್ಷರು / ಉಪಾಧ್ಯಕ್ಷರು / ಯಾವುದೇ ಪದಾಧಿಕಾರಿಗಳು / ನಿರ್ದೇಶಕರು, ಒಕ್ಕೂಟದ ವಾಹನಗಳನ್ನು ಬಳಸತಕ್ಕದ್ದಲ್ಲ ನಿರ್ದಿಷ್ಟವಾಹನವನ್ನು ಸಂಘದ / ಒಕ್ಕೂಟದ ಅಧ್ಯಕ್ಷರಿಗೆ / ಪದಾಧಿಕಾರಿಗಳಿಗೆ ಒದಗಿಸಿದ್ದಲ್ಲಿ ಅದನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳ ವಶಕ್ಕೆ ವಹಿಸತಕ್ಕದ್ದು, ಈ ಬಗ್ಗೆ ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು ಅಗತ್ಯ ಕ್ರಮವಿಡತಕ್ಕದ್ದು.
2. ಜಿಲ್ಲಾ ಹಾಲು ಒಕ್ಕೂಟಗಳು, ಹೊಸದಾಗಿ ಹಾಲು ಸಂಗ್ರಹಣಾ ಕೇಂದ್ರಗಳನ್ನು ತೆರೆಯತಕ್ಕದ್ದಲ್ಲ/ ಸ್ಥಾಪಿಸತಕ್ಕದ್ದಲ್ಲ.
3. ಜಿಲ್ಲಾ ಹಾಲು ಒಕ್ಕೂಟಗಳು ಸದಸ್ಯ ಸಂಘಗಳಿಗೆ ಯಾವುದೇ ರೀತಿಯ ಉಡುಗೊರೆ / ನೆನಪಿನ ಕಾಣಿಕೆಗಳನ್ನು ನೀಡತಕ್ಕದ್ದಲ್ಲ ಹಾಗೂ ಸನ್ಮಾನ ಸಭೆಸಮಾರಂಭಗಳನ್ನು ಏರ್ಪಡಿಸಿ ನಡೆಸತಕ್ಕದ್ದಲ್ಲ.
4. ಜಿಲ್ಲಾ ಹಾಲು ಒಕ್ಕೂಟಗಳು ಸದಸ್ಯ ಸಂಘಗಳಿಗೆ ವಿಶೇಷ ಯೋಜನೆಯಲ್ಲಿ ಯಾವುದೇ ಪಶು ಆಹಾರ /ಪಶು ಔಷಧಿಗಳನ್ನು ಉಚಿತವಾಗಿ ಸರಬರಾಜು / ಅಥವಾ ರಿಯಾಯಿತಿ ದರದಲ್ಲಿ ಮಾರಾಟ ಮಾಡತಕ್ಕದ್ದಲ್ಲ.

ಮೇಲ್ಕಂಡ ನೀತಿ ಸಂಹಿತೆಯನ್ನು ತಪ್ಪದೇ ಪಾಲಿಸುವಂತೆ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟಗಳಿಗೆ ನಿರ್ದೇಶಿಸಲಾಗಿದೆ.

(ಎನ್.ಸಿ. ಮುನಿಯಪ್ಪ)
**ಆಯುಕ್ತರು**
**ಸಹಕಾರ ಚುನಾವಣಾ ಆಯೋಗ**
**ಬೆಂಗಳೂರು**

ಪ್ರತಿಗಳು:-

1. ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ ಮತ್ತು ಗುಲ್ಬರ್ಗಾ ಜಿಲ್ಲೆ
2. ಸಹಕಾರ ಸಂಘಗಳ ಉಪನಿಬಂಧಕರು, ತುಮಕೂರು ಜಿಲ್ಲೆ ಮತ್ತು ಗುಲ್ಬರ್ಗಾ ಜಿಲ್ಲೆ
3. ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ ಮತ್ತು ಗುಲ್ಬರ್ಗಾ ಪ್ರಾಂತ್ಯ, ರಾಯಚೂರು
4. ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿ., ತುಮಕೂರು / ಗುಲ್ಬರ್ಗಾ
5. ವ್ಯವಸ್ಥಾಪಕ ನಿರ್ದೇಶಕರು, ಸಿ.ಎಂ.ಎಫ್.ನಿ, ಬೆಂಗಳೂರು
6. ಕಛೇರಿ ರಕ್ಷಾ ಕಡತ.